ಶ್ರೀ ಎಂ. ವಿ. ಕೃಷ್ಣಪ್ಪ.—3100 ಚಿಲ್ಲರೆ ಎಕರೆ ಬಿಟ್ಟರೆ, ಮಿಕ್ಕಿದ್ದೆಲ್ಲಾ ರೈತರೇ ಬೆಳೆಯುತಕ್ಕಂಥಾದ್ದು.

ಶ್ರೀ ಕೆ. ಎಚ್. ರಂಗನಾಥ್.—ರೈತರ ತಪ್ಪು ನುಬಗಳನ್ನು ನೋಡುವುದಕ್ಕೆ ಅಧಿಕಾರ ಇಟ್ಟುಕೊಂಡಿದ್ದೀರ?

(No answer).

ಶ್ರೀ ಕೆ. ಎಚ್. ರಂಗನಾಥ್.—28 ಸಾವಿರ ರೂಪಾಯಿ ಯಾವ ಸಾಲನಿಂದ ಬಾಕಿಇದೆ?

Mr. SPEAKER.—Supplementaries have been repeated.

ಶ್ರೀ ಎಸ್. ಎಂ. ಕೃಷ್ಣ.—Write off ಮಾಡಬೇಕೆಂದು ಸರ್ಕಾರದವರು ಉದ್ದೇಶ ಮಾಡಿಕೊಂಡಿದ್ದಾರೆಯೇ?

ಶ್ರೀ ಎಂ. ವಿ. ಕೃಷ್ಣಪ್ಪ.—Write off ಎಂದು ಕರೆಯುವುದಕ್ಕಾಗುವುದಿಲ್ಲ. Remission ಎಂದು ಕರೆಯಬೇಕಾಗುತ್ತದೆ. Remission Rules ಇವೆ, ಆ ರೂಲ್ಸ್ ಪ್ರಕಾರ ಹಾಗೆ ಮಾಡುವುದಕ್ಕೆ ಆಸ್ಪದವಿದ್ದರೆ ಮಾಡಬೇಕಾಗುತ್ತದೆ. ಇಲ್ಲದೆ ಹೋದರೆ ವಸೂಲು ಮಾಡುತ್ತೇವೆ.

ಶ್ರೀ ಗೋಪಾಲ ಸಾರೆನ್.—ಈ ಕಂಪೆನಿಯವರು ಬೇರೆ 7-8 ಕಾರ್ಖಾನೆಗಳನ್ನು ನಡೆಸುತ್ತಿದ್ದಾರೆ, experts, ದೊಡ್ಡವರು ಎಂದು ಹೇಳಿದಿರಿ. ಅಂಥವರು ಈ ಕೆಲಸವನ್ನೂ ಪೂರ್ತಿಗೊಳಿಸಿ ಉತ್ಪಾದನೆಯನ್ನು ಯಶಸ್ವಿಯಾಗಿ ಮಾಡಲಿಲ್ಲ. ಒಂದು ಕಡೆಯಲ್ಲ 28 ಸಾವಿರ ರೂಪಾಯಿ ಬಾಕಿ ಇಟ್ಟುಕೊಂಡಿದ್ದಾರೆ. ಇದನ್ನು ಸರ್ಕಾರದವರು ಹಾಗೆಯೇ ಬಿಟ್ಟರೆ, ಈ ರಾಜ್ಯಕ್ಕೆ ಅನ್ಯಾಯವಾಗಲಲ್ಲವೇ? ಇದರ ಬಗ್ಗೆ ಏನು ಆಕ್ಷೇಪಣೆ ತೆಗೆದುಕೊಳ್ಳುತ್ತೀರ?

ಶ್ರೀ ಎಂ. ವಿ. ಕೃಷ್ಣಪ್ಪ.—ಪಾಪ, ಅವರು ಇನ್ನೆಲ್ಲಿಯಾದರೂ ಹೋಗಿದ್ದರೆ, ಕೋಟ್ಯಾಂತರ ರೂಪಾಯಿ ಸಂಪಾದಿಸುತ್ತಿದ್ದರು. ನಮ್ಮನ್ನು ನಂಬಿ, ಮಲೆನಾಡಿಗೆ ಬಂದು ಕೆಟ್ಟಿದ್ದಾರೆ.

———

Appointment of Probationary Tahsildars and Block Development Officers.

*Q.—115. **Sri T. D. DEVENDRAPPA** (Bhadravathi).—

Will the Government be pleased to state :—

(*a*) the number of probationary Tahsildars and Block Development Officers appointed by them, since 1956 ;

(*b*) the reasons for appointing them in batches like 2nd, 3rd and 4th though they have been interviewed at one and the same time ?

*A.—**Sri M. V. KRISHNAPPA** (Minister for Revenue).—

(*a*) The number of probationary Tahsildars appointed since 1956 is as follows :—

Year	*No. of appointments made*
1958	50
1962	76

The number of Block Development Officers appointed since 1956 is as follows :

Year	*No. of appointments made*
1958	50
1961	67

(*b*) They were not appointed in three or four batches. But the appointments were made from out of the selected candidates as and

(Sri M. V. KRISHNAPPA)

when the vacancies arose ; the fact that candidates will be appointed and when thevacancies arise was made clear while the posts weres advertised by the Public Service Commission.

ಶ್ರೀ ಟಿ. ಡಿ. ದೇವೇಂದ್ರಪ್ಪ.—ತಾವು ಆಯ್ಕೆ ಮಾಡಿದ ಪ್ರೊಬೇಷನರುಗಳ ಹೈಕಿ ಗ್ರಾಮಾಂತರ ಪ್ರದೇಶದಿಂದ ಬಂದಿರತಕ್ಕ ಅರ್ಜಿದಾರರ ಸಂಖ್ಯೆ ಎಷ್ಟು ?

ಶ್ರೀ ಎಂ. ವಿ. ಕೃಷ್ಣಪ್ಪ.—ಪಿ. ಎಸ್. ಸಿ. ಅವರು ಮಾಡಿರುವ ನೇಮಕಗಳು ಅವು ; ಆದ್ದರಿಂದ ನಮ್ಮ ಹತ್ತಿರ ಆ ಮಾಹಿತಿ ಇರುವುದಿಲ್ಲ. ಅವರು ಸೆಲೆಕ್ಟ್ ಮಾಡಿ ಲಿಸ್ಟ್ ಕಳುಹಿಸಿದ್ದಾರೆ. ನಾವು ಅದನ್ನು ಒಪ್ಪಿಕೊಂಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1958ರಲ್ಲಿ 50, 1962ರಲ್ಲಿ 76 ಜನ ತಹಸೀಲ್ದಾರರನ್ನು ನೇಮಕ ಮಾಡಿರುವವರಲ್ಲಿ ಸರ್ವೀಸ್ ಕಮೀಷ್ಷನವರು ಹೇಳಿದಷ್ಟನ್ನೂ ಒಪ್ಪಿಕೊಂಡರೋ ಅಥವಾ ಸರ್ಕಾರದ ಮುಟ್ಟಕ್ಕೆ ಬಂದಮೇಲೆ ತಾವು ಏನಾದರೂ 'ಕೈವಾಡ' ನಡೆಸಿದರೋ ?

ಶ್ರೀ ಎಸ್. ನಿಜಲಿಂಗಪ್ಪ.—'ಕೈವಾಡ' ಎಂದರೆ ಏನು ?

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ಅವರು ಕನ್ನಡ ದೇಶದಲ್ಲಿ ಇದ್ದು ಇಷ್ಟು ಸಿಟ್ಟಾದರೆ ವ್ಯವಹಾರ ಮಾಡುವುದಕ್ಕಾಗುವುದಿಲ್ಲ. 'ಕೈವಾಡ' ಎಂದರೆ ನೀವು interfere ಮಾಡಿದಿರಾ ಎಂಬುದು ?

ಶ್ರೀ ಎಸ್. ನಿಜಲಿಂಗಪ್ಪ.—'ಕೈವಾಡ' ಎಂದರೆ ಬಹುಶಃ ಶ್ರೀ ಮುಕ್ಕಣ್ಣಪ್ಪನವರಿಗೆ ಕನ್ನಡ ಬಾರದು ಎಂದು ಕಾಣುತ್ತದೆ. ಅಥವಾ ಬಂದರೂ ತಪ್ಪು ತಿಳಿದುಕೊಂಡಿದ್ದಾರೆ ಎಂದು ಕಾಣುತ್ತದೆ. ಅದು ನಮಗೆ ಗೊತ್ತಾಗುತ್ತದೆ. ನೀವು ಏಕೆ ಈರೀತಿ ಕೇಳುತ್ತೀರಿ ಎಂದು ಗಂಭೀರವಾಗಿ ಕೇಳಿ, ಅಷ್ಟೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೈವಾಡ ಎನ್ನುವುದು ಗಂಭೀರ ರಹಿತ ಎಂದರೆ ಯಾವ ಪದ ಉಪಯೋಗಿಸ ಬೇಕು ? ಅದನ್ನು ಹೇಳಿಕೊಡಿ. ಕೈವಾಡ ಎನ್ನುವ ಪದದಿಂದ ತಮಗೆ affect ಆಗುವುದಾದರೆ ತಾವು ಸಿಟ್ಟಿಗೆ ಏಳಬಾರದು. ನಾವು ಸಿಟ್ಟಿಗೆ ಎದ್ದರೆ ನೀವು ಸಿಟ್ಟಾಗಬೇಡಿ ಎಂದು ಹೇಳಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಮಾನ್ಯ ಸದಸ್ಯರಲ್ಲಿ ಅರಿಕೆ ಮಾಡಿಕೊಳ್ಳುವುದು ಏನೆಂದರೆ ಕೇಳತಕ್ಕ ಪ್ರಶ್ನೆಯಲ್ಲಿ ಸ್ವಲ್ಪ ಗಾಂಭೀರ್ಯ ಇರಬೇಕು. 'ಕೈವಾಡ' ಎನ್ನುವದು ಸಾಧಾರಣವಾಗಿ ಯೋಗ್ಯವಾದ ಪದ ಅಲ್ಲ. ಈ ಸಭೆಗೆ ಘನತೆ ತರುವುದು ಅಲ್ಲ. ಉಪಯೋಗಿಸತಕ್ಕ ಶಬ್ದ ಯೋಗ್ಯವಾಗಿರಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

Mr. SPEAKER.—No comment on that word.

Sri C. J. MUCKANNAPPA.—I am submitting to the Hon'ble Chair. If the word "ಕೈವಾಡ" is an unparliamentary one and if it affects the dignity and decorum of the House according to the Hon'ble Chief Minister, I want a ruling from the Chair. I will abide by the decision of the Chair. In my opinion this word "ಕೈವಾಡ" will never damage the prestige or decorum of the House. I leave the matter to the Hon'ble Chair to give a ruling on this ponit.

Sri V. M. DEO.—In this connection, I want to bring this to the notice of the Hon'ble Chief Minister, Really he got angry.....

Mr. SPEAKER.—Are you putting a supplementary ? Let the question hour be over. We will take up that point conveniently.

ಶ್ರೀ ಸಿ. ಜೆ. ಮುಕ್ಕಣಪ್ಪ.—1962ರಲ್ಲಿ ಸರ್ವೀಸ್ ಕಮೀಷ್ಷನವರು ಸರ್ಕಾರದವರ ಒಪ್ಪಿಗೆಗೆ ಕಳುಹಿಸಿದಂಥ ಅಭ್ಯರ್ಥಿಗಳ ಸಂಖ್ಯೆ ಎಷ್ಟು ಮತ್ತು ಸರ್ಕಾರ ಅದಕ್ಕೆ ಸೇರಿಸಿದಂಥ ಸಂಖ್ಯೆ ಎಷ್ಟು?

ಶ್ರೀ ಎಂ. ವಿ. ಕೃಷ್ಣಪ್ಪ.—76 ಜನರನ್ನು ಪಿ. ಎಸ್. ಸಿ. ಅವರು ಕಳುಹಿಸಿದರು. 76 ಜನರನ್ನೂ ನಾವೂ accept ಮಾಡಿಕೊಂಡಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಿಂದಿನ ಮಂತ್ರಿಮಂಡಲ ಅಧಿಕಾರ ಕೆಳಗೆ ಇಡುವುದಕ್ಕಿಂತ ಒಂದು ದಿವಸ ಮುಂಚೆ ಸರ್ಕಾರಕ್ಕೆ ಕಳುಹಿಸಿದ ಸಂಖ್ಯೆಗೆ 10 ಜನರನ್ನು ಸೇರಿಸಿ ಅದನ್ನು ನೋಟಿಫೈ ಮಾಡಿರಲಿಲ್ಲವೇ ?

Sri M. V. KRISHNAPPA.—It is not correct.

ಅಧ್ಯಕ್ಷರು.—ತಮ್ಮ ಪ್ರಶ್ನೆ ಸ್ಪಷ್ಟವಾಗಿಲ್ಲ ; ಸ್ವಲ್ಪ ಸ್ಪಷ್ಟವಾಗಿ ಹೇಳಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸರ್ವೀಸ್ ಕಮೀಷ್ನರವರ ಇಂಟರ್‌ವ್ಯೂನಲ್ಲಿ ರಿಜೆಕ್ಟ್ ಮಾಡಿದಂಥ 10 ಜನರನ್ನು ಸರ್ವೀಸ್ ಕಮೀಷ್ನರವರು ಪಟ್ಟಿ ಕಳುಹಿಸಿದ ಮೇಲೆ ಅದರಲ್ಲಿ ಸರ್ಕಾರದವರು ಸೇರಿಸಲಿಲ್ಲವೇ ? ಈ 76ರಲ್ಲಿ ಆ 10 ಜನರು ಇಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ನನ್ನ ಹತ್ತಿರ ಇರುವ ಮಾಹಿತಿ ಬೇರೆ ರೀತಿಯಾಗಿದೆ. 16 ಜನ ಹೈಕೋರ್ಟಿಗೆ ರಿಟ್ ಹೋದರು ಆ 16 ಜನರಿಗೂ ಕೊಡಬೇಕಾಗುತ್ತದೆ ಎಂದು ಸರ್ಕಾರಕ್ಕೆ ತಿಳಿಸಿದರು ಅವರಿಗೆ ಕೊಡುವುದರಲ್ಲಿ ಇದೆ. ನೀವು ಹೇಳಿದ್ದು ತಪ್ಪು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—16 ಜನರ ವಿಚಾರವನ್ನು ನಾನು ಕೇಳುವುದಿಲ್ಲ. ಸರ್ವೀಸ್ ಕಮೀಷ್ನರವರು ಸಾರ್ವತ್ರಿಕ ಚುನಾವಣೆಗೆ ಹಿಂದೆ ಒಂದು ಪಟ್ಟಿ ಮಾಡುವಾಗ ಆ ದಿವಸ ಯಾರು ಮಂತ್ರಿಮಂಡಲದಲ್ಲಿದ್ದರೋ ಅಂತಹವರ ಅಳಿಯ, ಅತ್ತೆಯ ಮಗ ಇವರುಗಳ ಅರ್ಜಿ ತಿರಸ್ಕರಿಸಲಾಗಿತ್ತೋ ಅಂತಹವರು 10 ಜನರನ್ನು ಆ ಪಟ್ಟಿಯಲ್ಲಿ ಸೇರಿಸಲಿಲ್ಲವೇ ಎಂಬುದು ನನ್ನ ಪ್ರಶ್ನೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಇಲ್ಲ. ತಮಗೆ ಗೊತ್ತಿದೆ. ಪಿ. ಎಸ್. ಸಿ. ಒಂದು ಕಾಕ್‌ಸ್ಪಿಟ್ಯೂಷನಲ್ ಬಾಡಿ. ಸರ್ಕಾರ ಲಿಸ್ಟ್ ಕೊಡುವುದಿಲ್ಲ, ಅವರೆ ಆಯ್ಕೆ ಮಾಡುತ್ತಾರೆ.

ಶ್ರೀ ಎಸ್. ಎಂ. ಕೃಷ್ಣ.—ಪಿ. ಎಸ್. ಸಿ. ಅವರು ಮಾಡಿದಪಟ್ಟಿ ಸರ್ಕಾರಕ್ಕೆ ಬಂದಾಗ ಪುನಃ ಅವರಿಗೆ ಕಳುಹಿಸಿದ್ದು ನಿಜವೇ ?

ಶ್ರೀ ಎಂ. ವಿ. ಕೃಷ್ಣಪ್ಪ—ಇಲ್ಲ. ಬಂದತಕ್ಷಣ ಒಪ್ಪಿಕೊಂಡು ಜಾರಿಗೆ ತಂದಿದ್ದೇವೆ. ಅವರು ಟ್ರೈನಿಂಗ್‌ಗೆ ಹೋಗುತ್ತಾ ಇದ್ದಾರೆ.

ಶ್ರೀ ಜಿ. ವಿ. ಗೌಡ.—16 ಜನರನ್ನು ತೆಗೆದುಕೊಳ್ಳಿ ಎಂದು ಹೈಕೋರ್ಟಿನವರು ಆದೇಶ ಕೊಟ್ಟರು ಎಂದು ಹೇಳಿದಿರಿ. ಅದು ಯಾವಾಗ ಕೊಟ್ಟರು ? ಸರ್ಕಾರ ಇನ್ನೂ ಏಕೆ ಅದನ್ನು ನೇರ ಸೇರಿಸಲಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಸರ್ಕಾರ ಒಪ್ಪಿಕೊಂಡು 8-10 ದಿವಸ ಆಗಿರಬಹುದು, ಅಷ್ಟೇ. ಈಗ ಅವರ antecedents ನೋಡಬೇಕು. According to rules, we have to get the information from the various sources about their antecedents. It may take about a week or two.

ಶ್ರೀ ಜಿ. ವಿ. ಗೌಡ.—ಹೈಕೋರ್ಟ್ ಆದೇಶ ಕೊಡುವುದಕ್ಕೆ ಮೊದಲೇ ಅವರ antecedents ನೋಡಿ ಒಪ್ಪುವುದೇ ಅಥವಾ ಬಿಡುವುದೇ ಎಂದು ಏಕೆ ತಾವು ಯೋಜನೆ ಮಾಡಲಿಲ್ಲ ?

ಶ್ರೀ ಎಂ. ವಿ. ಕೃಷ್ಣಪ್ಪ.—ಒಪ್ಪಿಕೊಂಡಮೇಲೆ ಅವರ antecedents ನೋಡುತ್ತೇವೆಯೇ ಹೊರತು ಅದಕ್ಕೆ ಮೊದಲೇ ಅಲ್ಲ. Before that, we have no business to go into their antecedents.

Sri S. SIVAPPA.—When were the recommendations of the Public Service Commission regarding Tahsildars and Block Development Officers were received by the Government and when were the final orders passed on those recommendations ?

ಶ್ರೀ ಎಂ. ವಿ. ಕೃಷ್ಣಪ್ಪ.—ಫೈನಲ್ ಆರ್ಡರ್ಸ್ ಕಳೆದ ಏಪ್ರಿಲ್‌ನಲ್ಲಿ ಮಾಡಿದೆ.

ಶ್ರೀ ಎಸ್. ಶಿವಪ್ಪ.—ಜನರಲ್ ಎಲೆಕ್ಷನ್‌ಗೆ ಮೊದಲೇ ಈ ಲಿಸ್ಟ್ ಬಂದಿದ್ದಿತೇ ?

Mr. SPEAKER.—There are four units here. That is, appointments of Tahsildars made in 1958 and 1962 and appointments of Block Development Officers made in 1958 and 1961. Addressing Sri S. Sivappa. Why don't you put a specific question with regard to the appointment of Tahsildars in 1958 and in 1962 or the appointment of Block Development Officers in 1958 and 1961 ?

Sri S. SIVAPPA.—I want to know why the Government delayed passing orders on the recommendations of the Public Service Commission which were received somewhere during 1961. According to the Hon'ble Minister, the orders were passed in March 1962. Why did Government keep the recommendations in cold storage for nearly six months with regard to Tahsildars-1962 ?

Sri M. V. KRISHNAPPA.—The Public Service Commission sends recommendations and Government takes some time to consider the recommendations and pass orders. I cannot give the specific reasons the then Government had in mind. May be they thought that the general elections were coming near and that after the General Elections, the new Government might consider the matter.

Sri S. SIVAPPA.—Why did Government ask the Public Service Commission to call for applications and select the candidates ?

Sri M. V. KRISHNAPPA.—Generally, it takes some time. Not that it should be done in a hurried way. Appointing 76 Tahsildars is not a simple matter. It is but natural for the Public Service Commission or Government to take some time generally. There is nothing wrong in it.

ಶ್ರೀ ಎಸ್. ಶಿವಪ್ಪ.—ಇಷ್ಟು ದೀರ್ಘಕಾಲ ಈ ಪಟ್ಟಿ ನರ್ಕಾರದವರ ಹತ್ತಿರ ಇದ್ದುದರಿಂದ ಶ್ರೀಮಾನ್ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ತಮ್ಮ ಕೈವಾಡ ಉಪಯೋಗಿಸುವುದಕ್ಕೆ ಅವಕಾಶ ವಾಗಲಲ್ಲವೆ ?

ಶ್ರೀ ಎಂ. ವಿ. ಕೃಷ್ಣಪ್ಪ.—ಫೈನಲ್ ನವ ಆಫೀಸಿನಲ್ಲಿ ಇದ್ದ ಮಾತ್ರಕ್ಕೆ ಅದರಲ್ಲಿ ಕೈವಾಡ ಮಾಡುವುದಕ್ಕಾಗುವುದಿಲ್ಲ ಎಂಬುದು ಶ್ರೀಮಾನ್ ಮುಕ್ಕಣ್ಣಪ್ಪನವರಿಗೂ ಗೊತ್ತಿದೆ.

ಶ್ರೀ ಕೆ. ಎಚ್. ರಂಗನಾಥ್.—16 ಜನರನ್ನು ಮಾತ್ರ ಪರಿಗಣಿಸಬೇಕು ಎಂದು ತೀರ್ಮಾನ ಕೊಟ್ಟಿದ್ದಾರೆ ಎಂದು ಹೇಳಿದಿರಿ. ಆ ರಿಟ್ ಪೆಟಿಷರ್‌ಗಳು ಮೆರಿಟ್ ಮೇಲೆ ತೀರ್ಮಾನವಾಗಿದೆಯೇ ?

ಶ್ರೀ ಎಂ. ವಿ. ಕೃಷ್ಣಪ್ಪ.—ಆ ಬಗ್ಗೆ ತಾವು ಹೈಕೋರ್ಟಿನವರನ್ನು ಕೇಳಬೇಕು.

Sri K. H. RANGANATH.—Was it a direction of the High Court or was it a consent order in pursuance of the decision taken by it ?

Sri M. V. KRISHNAPPA.—It was a directive of the High Court to accept the 16 people and we had to accept them.

Sri G. V. GOWDA.—Was the directive issued after taking the decision on the merits or after obtaining consent from the Government ?

Sri M. V. KRISHNAPPA.—It is for the High Court to say.

Sri S. M. KRISHNA.—Did not the Advocate-General represent on behalf of the Government ?

Sri M. V. KRISHNAPPA.—He did.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಅಂಟಿಸಿಡೆಂಟ್ಸ್ ನೋಡುವುದರಲ್ಲಿ ಹೈಕೋರ್ಟಿನ ತೀರ್ಮಾನ ತಲೆಕೆಳಗಾದರೆ ಆಗ ಅದಕ್ಕೆ ನರ್ಕಾರದವರು ಹೊಣೆಗಾರರಾಗುತ್ತಾರೇನು ?

Sri M. V. KRISHNAPPA.—It is not a question of accepting or rejecting the decision of the High Court. Whenever Government has to make an appointment, as a rule, they would have to go into the antecedents of the officer proposed to be appointed.

Mr. SPEAKER.—The High Court has not given the appointment order.

Sri C. J. MUCKANNAPPA.—We can interpret between the lines. The directive of the High Court must be respected. The Government would have been wise if they had stated that theys are studying the orders of the High Court and that they are looking into the antecedents of some persons. But what they said now would amount to flouting the orders of the High Court. My question was whether Government is going to respect the decision of the High Court or reject it ?

Mr. SPEAKER.—It depends upon the terms of the orders of the High Court. The High Court would not have ordered the appointment of these persons, even if there are other grounds for rejecting some of them.

Sri C. J. MUCKANNAPPA.—Sir, my submission is that Government should be careful in answering supplementaries. We do not know how many directions have been given. I presume they might not have directed the appointment of all the 16 people. That is why I am requesting t he Government to be a little wise in giving replies.

Sri M. V. KRISHNAPPA.—Sir, if wisdom is the monopoly of the hon'ble Member, we are prepared to borrow a little of it from him.

Sri V. M. DEO.—Did the High Court give the judgement without considering the antecedents of the persons concerned ?

Sri M. V. KRISHNAPPA.—I will clarify the point. Whenever Government appoint an officer, generally they have to go into the antecedents. In fact, to give an illustration, the earlier appointment of 76 persons was made in a hurry. We wanted to expedite the whole thing in a day. Then we did not go into the question of antecedents. Later we found that one of them was in trouble having been an official in the Railways in Belgaum. He was reported to have misappropriated some sums of money and was a 'Wanted Man'.

Sri K. LAKKAPPA.—Is there any direction from the High Court to take into account the antecedents of the persons ?

Mr. SPEAKER.—Has the High Court prohibited the Government from doing so ?

Sri K. LAKKAPPA.—My question is whether there is a specific order to that effect ?

† Sri B. D. JATTI.—I will clarify the issue. 16 persons filed a writ petition. Their claim was that they were eligible for appointment. The High Court decided that they were eligible. But mere eligibility will not amount to an appointment. Before they are appointed by Government, their antecedents are to be looked into. The recommendation of the High Court or for that matter, those of the Public Service Commission are only recommendatory. Before we accept them, there would have to be a final order and that order would be issued only after looking into the antecedents of the officer proposed to be appointed.

Sri G. V. GOWDA.—Is it the opinion of the Government, that the directions of the High Court are only recommendations ?

Sri B. D. JATTI.—The Hon'ble Member is a practising advocate. They are as good as the recommendations of the High Court.

Mr SPEAKER.—The answer is clear beyond any doubt. The High Court does not pass an order directing the appointment of persons. It is for the Government to decide taking all factors into account. The only thing is that as per the orders of the High Court these persons are eligible to be considered and their claims cannot be overlooked on

(MR. SPEAKER)

merits. But that does not mean that Government is compelled to appoint them even if their appointment would be defective in other respects. We will proceed to the next question.

Construction of a Channel from Visvesvaraya Canal at Hulikere Tunnel to Turabannur area.

*Q.—225. Sri A. G. BANDI GOWDA (Srirangapatna).—

Will the Government be pleased to state:—

(*a*) whether they have proposed to construct a Channel starting from Visvesvaraya Canal at Hulikere Tunnel to Turabannur area in T.Narasipur Taluk *via* Nodekoppal, Yellachakanahalli, Alagud, Kodiyala, Neralakere and Yachenahalli;

(*b*) if the answer to (*a*) is in the affirmative, whether the survey and estimate completed;

(*c*) if so, when the P. W. D. intend to start the work?

A.— Sri S. NIJALINGAPPA (Chief Minister).—

(*a*) Yes.

(*b*) Yes. But detailed plans and estimates are awaited. Further, alternative proposals are under examination.

(*c*) Work will be taken up after examination of another alternative proposal and sanction to the finalised scheme.

ಶ್ರೀ ಎ. ಜಿ. ಬಂಡೀಗೌಡ.—ಈಗ ಕೊಟ್ಟಿರತಕ್ಕ ಉತ್ತರದಲ್ಲಿ ಪರ್ಯಾಯ ನಲಹೆಗಳಿವೆ ಎಂದು ತಿಳಿಸರಾಗಿದೆ. ಆ ಪರ್ಯಾಯ ನಲಹೆಗಳು ಯಾವುವು?

†ಶ್ರೀ ಎಸ್. ನಿಜಲಿಂಗಪ್ಪ.—ಈಗ ನಮ್ಮ ಮುಂದೆ ಎರಡು ನಲಹೆಗಳಿವೆ. ಆ ಪೈಕಿ ಒಂದು ಡೀಪ್ ಕಟಿಂಗ್ ಮತ್ತು ಟನರ್ ಮಾಡಬೇಕಾದ ಪ್ರುನಂಗವಿರುವುದರಿಂದ ಅದರ ಕಾಸ್ಟ್ ಜಾಸ್ತಿ ಆಗುತ್ತದೆ. ಈಗ ನಮ್ಮ ಮುಂದೆ ಬಂದಿರತಕ್ಕ ಎರಡನೆಯ ನಲಹೆಯಲ್ಲಿ ಇಷ್ಟು ಖರ್ಚು ಇಲ್ಲ. ಮೇಲಾಗಿ ಈ ಅಲ್ಟರ್‌ನೇಟೀವ್ ಪ್ರಪೋಜಲ್‌ನಿಂದ 5,000 ಎಕರೆಗಳಿಗೆ ನೀರನ್ನು ಒದಗಿಸಬಹುದೆಂದು ಅಂದಾಜು ಮಾಡರಾಗಿದೆ. ಹೀಗೆ ಈ ಎರಡು ಪ್ರಪೋಜಲ್‌ಗಳು ನಮ್ಮ ಮುಂದಿವೆ.

ಶ್ರೀ ಎ. ಜಿ. ಬಂಡೀಗೌಡ.—ಈಗ ಸರ್ಕಾರದ ಪರಿಶೀಲನೆಯಲ್ಲಿರುವ ಎರಡನೆಯ ಅಲ್ಟರ್ ನೇಟಿವ್ ಪ್ರಪೋಸಲ್ ಸಹ ಈಗ ತೋರಿಸಿರುವ ಲೈನಿನಲ್ಲೇ ರನ್ ಆಗುತ್ತವೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಕಾಲುಭಾಗ ಹೆಚ್ಚು ಕಡಮೆಯಾಗಬಹುದು.

ಶ್ರೀ ಎ. ಜಿ. ಬಂಡೀಗೌಡ.—ಈ ಕಾರ್ಯವನ್ನು ಅದಷ್ಟು ಬೇಗ ಕೈಗೊಳ್ಳುವರೆ?

ಶ್ರೀ ಎಸ್. ನಿಜಲಿಂಗಪ್ಪ —ನಮ್ಮ ಉದ್ದೇಶವೂ ಅದೇ ಆಗಿದೆ.

ಶ್ರೀ ಜೆ. ದೇವಯ್ಯ.—ಮದ್ದೂರು, ಮಳವಳ್ಳಿ, ಕಾವೇರಿ ನಾಲಾ, ಇತ್ಯಾದಿ ಹಳೇ ನಾಲಾಗಳನ್ನು ತೆಗೆಯುವಾಗ, ಬಿಡುಪಾಗ ಅಕಸ್ಮಿಕವಾಗಿ ಅಲ್ಲಲ್ಲೇ ನೀರಾವರಿಗೆ ಬರತಕ್ಕ ಜಮೀನುಗಳು ಕೈಬಿಟ್ಟು ಹೋಗಿದ್ದರೆ ಈಗ ಅಂಥಾ ಜಮೀನುಗಳಿಗೆ ನೀರನ್ನು ನರಬರಾಯಿ ಮಾಡಲು ಈ ಯೋಜನೆಯಲ್ಲಿ ಅವಕಾಶವಿದೆಯೇ?

ಶ್ರೀ ಎಸ್. ನಿಜಲಿಂಗಪ್ಪ.—ಈಗ ಅಂದಾಜಾಗಿರತಕ್ಕ 5,000 ಎಕರೆಗಳಲ್ಲಿ ಅದೂ ಸೇರಿರಬಹುದು. ಎಷ್ಟೆಷ್ಟು ಜನರಿಗೆ ನೀರು ತೆಗೆದುಕೊಳ್ಳಲು ಅವಕಾಶವಿದೆಯೋ ಅವರಿಗೆಲ್ಲ ಅನುಕೂಲ ಪಾಗಿಯೇ ಆಗುತ್ತದೆ.

Mr. SPEAKER.—Question hour is over.